## ಸೂಪರ್‌ಮ್ಯಾನ್ ಶಂಕರ್!

ಕಳೆದ ವರ್ಷ ಶಂಕರ್‌ನಾಗ್ ಹುಟ್ಟುಹಬ್ಬದಂದು (ನ.9) ಶುರುವಾಗಿದ್ದ 'ಪ್ರವಾದಿ' ಆಮೇಲೆ ತಣ್ಣಗಾಗಿತ್ತು. ಈ ವರ್ಷದ ಶಂಕರ್ ಹುಟ್ಟುಹಬ್ಬದಂದು 'ಪ್ರವಾದಿ' ಮತ್ತೆ ಜೀವಗೊಂಡಿದ್ದಾನೆ. ಮುಂದಿನ ಹುಟ್ಟುಹಬ್ಬಕ್ಕೆ ತೆರೆಯ ಮೇಲೆ ಬರಲು ಸಿದ್ಧವಾಗುತ್ತಿದ್ದಾನೆ.

'ಪ್ರವಾದಿ' ತಂಡದೊಂದಿಗೆ ಶಂಕರ್‌ನಾಗ್ ಹುಟ್ಟುಹಬ್ಬ ಆಚರಿಸಿದ ಚಿತ್ರದ ನಿರ್ಮಾಪಕ ಭೈರವ್ ಸುರೇಶ್, ತಮ್ಮ ಅಮೆರಿಕಾದ ಗೆಳೆಯರ ಸಹಕಾರದೊಂದಿಗೆ ಚಿತ್ರವನ್ನು ರೂಪಿಸಲು ಮುಂದಾಗಿದ್ದಾರೆ. ಅನಿಮೇಟೆಡ್ ಶಂಕರ್‌ನಾಗ್ ಜೊತೆಗೆ ನೈಜ ಪಾತ್ರಗಳೂ ಚಿತ್ರದಲ್ಲಿ ಇರಲಿವೆಯಂತೆ. ಶಂಕರ್ ಅವರನ್ನು ಸೂಪರ್‌ಮ್ಯಾನ್ ಆಗಿ ತೋರಿಸುವ ಈ ಚಿತ್ರ ತಾಂತ್ರಿಕವಾಗಿ ಅದ್ಭುತವಾಗಿರಲಿದೆ ಎನ್ನುವ ನಂಬಿಕೆ ನಿರ್ಮಾಪಕರದು.

'ಶಂಕರ್‌ಗೆ ಅಭಿಮಾನದ ಅರ್ಪಣೆಯಾಗಿ ಈ ಚಿತ್ರ ನಿರ್ಮಿಸಲು ಏಕಾಂಗಿ ಹೋರಾಟ ನಡೆಸುತ್ತಿದ್ದೇನೆ. ಶಂಕರ್ ಜೊತೆ ಕೆಲಸ ಮಾಡಿದ ಕಲಾವಿದರ ಜೊತೆಗೆ ಇತರ ಎಂಟ್ಹತ್ತು ದೊಡ್ಡ ಕಲಾವಿದರನ್ನು ಈ ಚಿತ್ರದಲ್ಲಿ ತೊಡಗಿಸಿಕೊಳ್ಳುವ ಪ್ರಯತ್ನ ನಡೆಸಿದ್ದೇವೆ' ಎಂದರು ಸುರೇಶ್.

ಅಂದಹಾಗೆ, ಶಂಕರ್ ಹುಟ್ಟುಹಬ್ಬದಂದು ಸೆಟ್ಟೇರಿದ ಮತ್ತೊಂದು ಚಿತ್ರ 'ಆಟೋರಾಜ'. ಹಳೆಯ ಚಿತ್ರದ ಶೀರ್ಷಿಕೆ ಹೊಸ ಕಥನದ ಮೂಲಕ ಶಂಕರ್ ಅವರನ್ನು ನೆನಪಿಸುತ್ತಿದೆ. ಸರ್ದಾರ್ ಸತ್ಯ ನಾಯಕನಾಗಿ ನಟಿಸುವ ಈ ಚಿತ್ರದ ನಿರ್ದೇಶನ ತಾರೇಶ್ ರಾಜ್ ಅವರದ್ದು. ಅಂದಹಾಗೆ, ಸತ್ಯ ಅವರ ನಿಜವಾದ ಹೆಸರು ಕೂಡ ಶಂಕರ್ ಅಂತೆ.





## ಪಾಗಲ್ ಸತ್ಯ ಮತ್ತು ಪೂಜಾ

ಮಳೆ ಹುಡುಗಿ ಪೂಜಾ ಗಾಂಧಿ ಅಪರೂಪಕ್ಕೆ ಸಿನಿಮಾ ಕಾರ್ಯಕ್ರಮದಲ್ಲಿ ಕಾಣಿಸಿಕೊಂಡಿದ್ದರು. ಅದು, 'ಪಾಗಲ್' ಚಿತ್ರದ ಹಾಡುಗಳ ಸೀಡಿ ಬಿಡುಗಡೆ ಕಾರ್ಯಕ್ರಮ. ಒಬ್ಬರನ್ನೊಬ್ಬರು ಪಾಗಲ್ ಎಂದು ಲೇವಡಿ ಮಾಡಿಕೊಳ್ಳುತ್ತ, ಈ ಚಿತ್ರ ನೋಡಿದವರು ಪಾಗಲ್ ಆಗುವುದಿಲ್ಲವೆಂದು ಆಶ್ವಾಸನೆ ನೀಡುತ್ತ ಚಿತ್ರತಂಡ ಸಂಭ್ರಮದಿಂದ ಓಡಾಡಿಕೊಂಡಿತ್ತು.

'ಇಂಥ ಪಾತ್ರ ಎಂದೂ ಮಾಡಿರಲಿಲ್ಲ. ಸಿನಿಮಾ ಹಾಗೂ ನನ್ನ ಪಾತ್ರ ಹೊಸ ರೀತಿ ಇದೆ' ಎಂದು ಪೂಜಾ ಖುಷಿ ವ್ಯಕ್ತಪಡಿಸಿದರು. ಆದರೆ, ಪಿ.ಎನ್.ಸತ್ಯ ಅವರ ಮಾತಿನಲ್ಲಿ ಸಿಹಿಯೂ ಇತ್ತು, ವಿಷಾದವೂ ಇತ್ತು. ಈ ಚಿತ್ರದಲ್ಲವರು ಮೊದಲ ಬಾರಿಗೆ ಹೀರೊ ಆಗಿ ಕಾಣಿಸಿಕೊಂಡಿದ್ದಾರೆ. ಕಥೆ, ಚಿತ್ರಕಥೆ, ನಿರ್ದೇಶನ ಕೂಡ ಅವರದ್ದೇ. ಇದೆಲ್ಲವೂ ಸರಿಯೇ. ಆದರೆ, 'ಸತ್ಯ ಕಂಪನೀಸ್' ಹೆಸರಿನಲ್ಲಿ ಸಿನಿಮಾ ಆರಂಭಿಸಿದ್ದ ಅವರಿಗೆ ಆನಂತರ ಎದುರಾದ ಆರ್ಥಿಕ ಅಡಚಣೆಗಳು ಘಾಸಿಗೊಳಿಸಿವೆ. ಕೊನೆಗೆ, ಮುರಳೀಧರ್ ಸಾರಥ್ಯದಲ್ಲಿ ಚಿತ್ರ ಮುಂದುವರಿದಿದೆ.

'ಪಾಗಲ್' ಸಂಗೀತ ವಿ.ಮನೋಹರ್ ಅವರದ್ದು. ಎಪ್ಪತ್ತರ ದಶಕದ ಜನಪ್ರಿಯ ಗೀತೆ 'ಇಲ್ಲೇ ಸ್ವರ್ಗ ಇಲ್ಲೇ ನರಕ' ಗೀತೆಯನ್ನು ಇಲ್ಲವರು ರೀಮಿಕ್ಸ್ ಮಾಡಿದ್ದಾರೆ. ಆಗ ನರಕ–ಸ್ವರ್ಗದ ಗೀತೆ ಹಾಡಿದ್ದ ಕೆ.ಎಸ್.ಎಲ್.ಸ್ವಾಮಿ ಈಗ ಹೊಸ ಚಿತ್ರಕ್ಕೂ ಹಳೆಯ ಗೀತೆಯನ್ನು ಹೊಸ ಹುಮ್ಮಸ್ಸಿನಲ್ಲಿ ಹಾಡಿದ್ದಾರಂತೆ.

## ಸ್ವರಕೆ ಜೊತೆಯಾಗಿ...

'ಗೀತೆಗಳನ್ನೇ ಕೇಳಿಸಿಲ್ಲ. ಮಾತನಾಡಿ ಎಂದರೆ ಏನನ್ನು ಮಾತನಾಡುವುದು?'– ಹಿರಿಯ ಸಂಗೀತ ನಿರ್ದೇಶಕ ರಾಜನ್ ಕಡ್ಡಿ ಮುರಿದಂತೆ ಹೇಳಿದಾಗ 'ಸ್ವರಾಂಜಲಿ' ಚಿತ್ರತಂಡದ ಸದಸ್ಯರು ಪೆಚ್ಚಾದದ್ದು ಸಹಜವೇ ಆಗಿತ್ತು. ಹಿರಿಯರಿಗೆ ಗೌರವ ಸಲ್ಲಿಸುವ ಸಂಪ್ರದಾಯದಂತೆ ರಾಜನ್‌ರನ್ನು ಗೌರವಿಸಿದ ಚಿತ್ರ ತಂಡ, ನಾಲ್ಕು ಮಾತಾಡಿ ಎಂದಾಗ ಅವರು ಹೇಳಿದ್ದು– 'ಸುಮ್ಮನೆ ಮಾತನಾಡುವುದು ಹೇಗೆ? ಹಾಡುಗಳನ್ನಾದರೂ ಕೇಳಿಸಿದ್ದರೆ ಅನಿಸಿಕೆ ಹೇಳಬಹುದಿತ್ತು'.

'ಸ್ವರಾಂಜಲಿ'ಯ ಗೀತೆಗಳ ಧ್ವನಿಮುದ್ರಿಕೆ ಸಂದರ್ಭದಲ್ಲಿ ಗೌರವಕ್ಕೊಳಗಾದ ರಾಜನ್ ಅವರಲ್ಲಿ ಮಾತುಗಳಿಲ್ಲದಿದ್ದರೂ, ಚಿತ್ರದ ಆಲ್‌ರೌಂಡರ್ (ಕಥೆ– ಚಿತ್ರಕಥೆ, ನಿರ್ದೇಶನ, ನಿರ್ಮಾಣ) ಎಂ.ಎಸ್.ಶ್ರೀನಿವಾಸ್ ಅವರಲ್ಲಿ ಹೇಳಿಕೊಳ್ಳಲು ಸಾಕಷ್ಟು ವಿಷಯಗಳಿದ್ದವು. ಒಂದು ವರ್ಷದ ಹಿಂದೆ ಸ್ವರಾಲಾಪ ಆರಂಭಿಸಿದ ಚಿತ್ರ, ಆರ್ಥಿಕ ಅಡಚಣೆಗಳಿಂದ ಕುಂಟುತ್ತಾ ಸಾಗಿ ಈಚೆಗಷ್ಟೇ ಚಿತ್ರೀಕರಣ ಮುಗಿಸಿದೆ. ಈಗ ತೆರೆಕಾಣಲು ಸಿದ್ಧವಾಗಿದೆ. ಸಿನಿಮಾ ಮುಗಿಸಲು ತಾವು ಪಟ್ಟ ಕಷ್ಟಕೋಟಲೆಗಳನ್ನು ಹೇಳಿಕೊಳ್ಳುವಾಗ ಶ್ರೀನಿವಾಸ್ ಭಾವುಕರಾಗಿದ್ದರು.

ಇದೊಂದು ಸಂಗೀತಮಯ ಚಿತ್ರವಂತೆ. ದುನಿಯಾದ ರಶ್ಮಿ ಹಾಗೂ ರಮಣ ಎನ್ನುವ ಹೊಸ ಹುಡುಗ ಚಿತ್ರದ ಪ್ರಮುಖ ಪಾತ್ರಗಳಲ್ಲಿದ್ದು, ಸ್ಫೂರ್ತಿ ಮತ್ತೊಬ್ಬ ನಾಯಕಿಯಾಗಿ ನಟಿಸಿದ್ದಾರೆ. ಶರತ್ ಲೋಹಿತಾಶ್ವ ಅವರಿಗೂ ಒಳ್ಳೆಯ ಪಾತ್ರವಿದೆಯಂತೆ. ಅಂದಹಾಗೆ, ಈ ಚಿತ್ರದ ಸಂಗೀತ ಚಂದ್ರಕಾಂತ್ ಅವರದ್ದು.



■ ರಘು